**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.858/2024</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸಿದ್ದಲಿಂಗ ತಂದೆ ಮಲ್ಲಪ್ಪ ಪೂಜಾರಿ
ವಃ 27 ವರ್ಷ, ಉಃ ಲಾರಿ ಡ್ರೈವರ
ಸಾಃ ಕೊಡ್ಲಾ ಗ್ರಾಮ
ತಾಃ ಸೇಡಂ

-----

**<u>ಆ ಪಾ ದ ನೆ</u>**

ಅಭಿಯೋಜನೆಯವರು ಆರೋಪಿತನಾದ ನಿನ್ನ ಮೇಲೆ ಹೊರಿಸಿರುವ ಆರೋಪವೇನೆಂದರೆ, ದಿನಾಂಕ 06-12-2023ರಂದು ಸಾಯಂಕಾಲ 06.30 ಗಂಟೆಯ ಸುಮಾರಿಗೆ ಸೇಡಂ ಪೋಲೀಸ ಠಾಣಾ ಹದ್ದಿಯಲ್ಲಿರುವ ಕಲಬುರಗಿ-ಸೇಡಂ ಮುಖ್ಯ ರಸ್ತೆಯಲ್ಲಿ ಸೇಡಂ ಲಾರಿಯಾರ್ಡ ಹತ್ತಿರ ಚಾಸಾ.4 ಮತ್ತು 5 ರವರು ತಮ್ಮ ಅಟೋ ನಂ. KA 32 B 9185 ನೇದ್ದರಲ್ಲಿ ಕುಳಿತು ಕಲಗುರ್ತಿಯಿಂದ ಸೇಡಂಕ್ಕೆ ಬರುತ್ತಿದ್ದಾಗ ಲಾರಿಯಾರ್ಡ ಹತ್ತಿರ ಎದುರುಗಡೆಯಿಂದ ಅಂದರೆ ಸೇಡಂ ಕಡೆಯಿಂದ ಕಲಬುರಗಿ ಕಡೆಗೆ ಬರುತ್ತಿದ್ದ ಆರೋಪಿತನು ತನ್ನ ಟ್ಯಾಂಕರ್ ವಾಹನ ನಂ. MH 12 UM 5773 ನೇದ್ದನ್ನು ಅತೀವೇಗವಾಗಿ ಮತ್ತು ನಿಷ್ಕಾಳಜಿತನದಿಂದ ನಡೆಸಿಕೊಂಡು ಬಂದು ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದ ಚಾಸಾ4 ನೇದ್ದವನ ಅಟೋಕ್ಕೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದು ಇದರಿಂದ ಅಟೋ ಪಲ್ಟಿಯಾಗಿ ರಸ್ತೆಯ ಪಕ್ಕದಲ್ಲಿ ಬಿದ್ದು ಚಾಸಾ.4 ರವರಿಗೆ ಎರಡು ಕಾಲುಗಳಿಗೆ ಮೊಣಕಾಲು ಕೆಳಭಾಗದಲ್ಲಿ ಭಾರಿ ರಕ್ತಗಾಯವಾಗಿದ್ದು ಮತ್ತು ಹೊಟ್ಟೆಗೆ ಎದೆಗೆ ಭಾರಿ ಗುಪ್ತಗಾಯವಾಗಿದ್ದು ಅಲ್ಲದೇ ಕೈಗಳಿಗೆ ಹಾಗೂ ಕೈಬೆರಳುಗಳಿಗೆ ಮತ್ತು ಮೂಗಿಗೆ ರಕಗಾಯಗಳಾಗಿದ್ದು ಮತ್ತು ಚಾಸಾ.5 ರವರಿಗೆ ಬಲಗಾಲು ಮೊಣಕಾಲಿಗೆ ಭಾರಿ ರಕ್ತಗಾಯವಾಗಿದ್ದು, ತಲೆಗೆ ಹಾಗೂ ಕೈಕಾಲುಗಳಿಗೆ ತರಚಿದ ಗಾಯಗಳಾಗಿದ್ದು, ಚಾಸಾ.6 ಮತ್ತು 7 ರವರು ಕೂಡಿ ಚಾಸಾ4, 5 ರವರಿಗೆ ಅಟೋದಿಂದ ಹೊರಗೆ ತೆಗೆದು ಉಪಚಾರ ಕುರಿತು ಅಂಬುಲೆನ್ಸದಲ್ಲಿ ಹಾಕಿ ಆಸ್ಪತ್ರಗೆ ಕಳುಹಿಸಿದ್ದು ಇರುತ್ತದೆ. ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 279, 338 ನೆದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕಃ 26-03-2026 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.858/2024</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸಿದ್ದಲಿಂಗ ತಂದೆ ಮಲ್ಲಪ್ಪ ಪೂಜಾರಿ
ವಃ 27 ವರ್ಷ, ಉಃ ಲಾರಿ ಡ್ರೈವರ
ಸಾಃ ಕೊಡ್ಲಾ ಗ್ರಾಮ
ತಾಃ ಸೇಡಂ

**<u>ಆಪಾದನೆ</u>**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

ಸಹಿ/-

ದಿನಾಂಕ ಃ 26-03-2026 ಪ್ರ.ದ.ನ್ಯಾ.ದಂ. ಸೇಡಂ.